ಆಮಂತ್ರಣ ಬಂದರೆ, ಆತ ತಪ್ಪದೇ ಹೋಗಿ ಅಲ್ಲಿ ಹುಡುಗರು ದೊಡ್ಡವರು ಎನ್ನುವ ಪರಿಬೇಧ ಇಲ್ಲದೆ ಎಲ್ಲರನ್ನೂ ಕಲೆ ಹಾಕಿ 'ನಿಮಗೆ ಏನು ಬೇಕು ಹೇಳಿ? ಅದನ್ನು ಈಗ ನಾನು ತರಿಸಿಕೊಡುತ್ತೇನೆ ನೋಡಿ!' ಎಂಬ ಪಂಥಾಹ್ವಾನ ಒಡ್ಡಲು ಪ್ರಾರಂಭಿಸಿದ. ಸಮಾರಂಭ ನಡೆಯುವ ಸ್ಥಳದ ಸಮೀಪದಲ್ಲಿ ಪೇಟೆ ಇಲ್ಲದಿದ್ದರೂ ಪೇಟೆ ಇರುವ ಕಡೆಯಲ್ಲಿ ಲಭ್ಯವಿರುವ ತಿಂಡಿ ತೀರ್ಥಗಳನ್ನಲ್ಲದೆ ಇತರ ಸಣ್ಣಪುಟ್ಟ ವಸ್ತುಗಳನ್ನು ಅಂದರೆ ಬೆಂಕಿಪೆಟ್ಟಿಗೆ, ಬ್ಯಾಟರಿಸೆಲ್, ಪೆನ್ಸಿಲು ಇತ್ಯಾದಿಗಳನ್ನೂ ತರಿಸಲು ಮುಂದಾದ. ಅದು ಸಾಲದು ಎನ್ನುವಂತೆ 'ಒಂದು ಹರಿವಾಣ ತನ್ನಿ' ಎಂದು ಅಲ್ಲಿದ್ದವರಿಗೆ ಅಜ್ಞಾಪಿಸಿ ಅದರಲ್ಲಿ ಒಂದಿಷ್ಟು ದುಡ್ಡಿಟ್ಟು ಅದರ ಮೇಲೆ ತನ್ನ ಶಾಲನ್ನು ಹಾಸಿ ಕ್ಷಣ ಬಿಟ್ಟು ಆ ಶಾಲನ್ನು ಎತ್ತಿದಾಗ ಅಲ್ಲಿ ಮಲ್ಲಿಗೆ ಹೂವಿನ ಚೆಂಡು ಕಾಣುತ್ತಿತ್ತು.

ಇದೆಲ್ಲದರ ಜೊತೆ ಕುಪ್ಪಣ್ಣ ತನ್ನ ಬೇಸಾಯದ ಗದ್ದೆಯ ಬದಿಯಲ್ಲಿರುವ ಪುಟ್ಟ ಹಳ್ಳಕ್ಕೆ ಮೂರು 'ಮಂಕರಿ' (ಬಿದಿರಿನ ಬುಟ್ಟಿ) ಇಟ್ಟು ಅದರಿಂದ ನೀರು ಸೇದಿ ಗದ್ದೆಗೆ ಹಾಕುತ್ತಿದ್ದಾನೆ ಎನ್ನುವುದೂ ಸುದ್ದಿಯಾಯಿತು. ಅದನ್ನು ನೋಡಲು ಆಗೊಮ್ಮೆ ಈಗೊಮ್ಮೆ ಎನ್ನುವಂತೆ ಜನರು ಬರತೊಡಗಿ, ಬಂದವರೆಲ್ಲ ಹೆದರಿದ್ದೂ ಆಯಿತು. ಇದರಿಂದ ಗಾಬರಿಗೊಂಡ ಒಬ್ಬಿಬ್ಬರು ಊರಿನ ಮುಖಂಡರನ್ನು ಭೇಟಿಯಾಗಿ 'ಕುಪ್ಪಣ್ಣ ಭಟ್ಟನಿಂದ ಅಪಾಯ ಆಗದೇ?' ಎಂಬ ಶಂಕೆ ವ್ಯಕ್ತಪಡಿಸಿದರು. ಅದನ್ನು ಒಪ್ಪಿಕೊಂಡ ಮುಖಂಡರು ಗೋವಿಂದಭಟ್ಟರನ್ನು ಕಂಡು 'ಇದೆಂಥ ಮಾಯಾವಿದ್ಯೆ ಸ್ವಾಮಿ? ನೀವು ಯಾವತ್ತೂ ಹೀಗೆ ಮಾಡಿದ್ದು ನಮಗೆ ಗೊತ್ತಿಲ್ಲ. ಆ ಭಟ್ಟರಿಗೆ ನಿಮ್ಮಂಥವರು ಈಗ ಬುದ್ಧಿ ಹೇಳದಿದ್ದರೆ, ನಾಳೆ ಅವರು ಈ ಊರಿಗೆ ಏನಾದರೂ ಅಪಾಯ ತಂದೊಡ್ಡುತ್ತಾರೋ ಏನೋ!' ಎಂದು ವಿನಂತಿಸಿದರು.

ಗೋವಿಂದ ಭಟ್ಟರು ಸ್ವಲ್ಪ ಹೊತ್ತು ಮೌನವಾದರು. ಆಮೇಲೆ ನಿರ್ಲಿಪ್ತರಾಗಿ 'ನೀವೇನೂ ಹೆದರಿಕೊಳ್ಳುವಂಥ ಪ್ರಸಂಗ ಅವರಿಂದ ಈ ಊರಿಗೆ ಆಗುವುದಿಲ್ಲ. ಅದು ಅವರು ಕುಟ್ಟಿಚಾತ ಎಂಬ ನೀಚ (ಕ್ಷುದ್ರ) ದೇವತೆಯನ್ನು ಒಲಿಸಿಕೊಂಡು ಮಾಡುವ ಚಮತ್ಕಾರ. ಆ ದೇವತೆಯ ಸಿದ್ಧಿಯಿಂದ ಒಳ್ಳೆಯದನ್ನು ಮಾಡುವ ಶಕ್ತಿ ಯಾರಿಗೂ ಇಲ್ಲ. ಆದರೆ ಅಪಾಯ ಇರುವುದು ಅವರಿಗೇ! ಯಾಕೆಂದರೆ ಆ ದೇವತೆಯನ್ನು ಸಿದ್ಧಿ ಮಾಡಿಕೊಂಡ ಸಾಧಕನು ಆ ದೇವತೆಗೆ ದಿನಾ ಏನಾದರೊಂದು ಕೆಲಸವನ್ನು ಕೊಡುತ್ತಿರಬೇಕು. ಉದಾಹರಣೆಗೆ 'ಹಾರುವ ಹಕ್ಕಿಗಳನ್ನು ಲೆಕ್ಕ ಮಾಡು ಅಥವಾ ಆ ಮರದಲ್ಲಿ ಎಷ್ಟು ಎಲೆಗಳಿವೆ ನೋಡು' ಇತ್ಯಾದಿಯಾದರೂ ಹೇಳಬೇಕು. ಹಾಗೆ ಹೇಳಿದಾಗ ಆ ಕ್ಷುದ್ರದೇವತೆ ಅದನ್ನು ಒಪ್ಪಿಕೊಂಡು ಆ ಕೆಲಸದಲ್ಲಿ ಮಗ್ನವಾಗುತ್ತದೆ. ಅದು ಆ ಕೆಲಸವನ್ನು ಮುಗಿಸಿದ ಮೇಲೆ 'ಇನ್ನೇನು?' ಎನ್ನುವಾಗ ಅದಕ್ಕೆ ಇನ್ನೊಂದು ಕೆಲಸವನ್ನು ಕೊಡಬೇಕು. ಕೊಡದಿದ್ದರೆ ಅದು ಮುನಿಯುವುದಷ್ಟೇ ಅಲ್ಲ, ಆ ಸಾಧಕನನ್ನೂ ಬಲಿ ತೆಗೆದುಕೊಳ್ಳುವುದೂ ಇಲ್ಲದಿಲ್ಲ' ಎಂದವರೇ, 'ನಾನಾಗಿಯೇ ಅವನ ಅಹಂಕಾರವನ್ನು ಮುರಿಯಲು ಹೋಗುವುದಿಲ್ಲ! ಅಂಥ ಸಂದರ್ಭ ಬಂದರೆ ಆಗ ಏನೂ ಮಾಡಬೇಕೋ ಅದನ್ನು ಮಾಡೋಣ' ಎಂದೂ ಆಡಿದರು.

ಕುಪ್ಪಣ್ಣ ಭಟ್ಟನಿಗೆ ಊರಮಂದಿ ಗೋವಿಂದ ಭಟ್ಟರನ್ನು ಹೋಗಿ ಮಾತನಾಡಿಸಿದ್ದು ತಿಳಿಯಿತು. ಅದರಿಂದ ಅವನಿಗೆ ಅಸಮಾಧಾನವೂ ಆಯಿತು. ಗೋವಿಂದ ಭಟ್ಟರಿಗೂ ಊರ ಮಂದಿಗೂ ತನ್ನ ಪರಾಕ್ರಮವನ್ನು ತೋರಿಸಿಯೇ ಬಿಡುತ್ತೇನೆ ಎಂಬ ನಿರ್ಧಾರಕ್ಕೆ ಬಂದ ಕುಪ್ಪಣ್ಣ ಭಟ್ಟ ಒಂದು ಮದುವೆ ಮನೆಯಲ್ಲಿ ಹಿರಿಯರೊಬ್ಬರನ್ನು ಮತ್ತು ಹುಡುಗನೊಬ್ಬನನ್ನು ಎರಡು ಕಂಬಗಳಿಗೆ ಕಟ್ಟಿಹಾಕುತ್ತಾ 'ನೀವೇನೂ ಹೆದರಬೇಡಿ. ಆದರೆ ನನ್ನ ಶಕ್ತಿ ಎಷ್ಟು ಎಂಬುದನ್ನು ಈಗ ಇಲ್ಲಿದ್ದವರು ನೋಡಲಿ' ಎನ್ನುತ್ತಾ ಆ ಇಬ್ಬರ ಮುಖಕ್ಕೂ ಬಟ್ಟೆ ಕಟ್ಟಿ 'ಛೂ' ಅಂತ ಕೈಯಾಡಿಸಿದ. ತಕ್ಷಣ ಆ ಇಬ್ಬರೂ ಕಂಬವನ್ನು ಬದಲಾಯಿಸಿಕೊಂಡದ್ದು ಕಂಡು ಬಂತು. ಆಶ್ಚರ್ಯ ಅಂದರೆ ಬಂಧನದಲ್ಲಿದ್ದ ಆ ಇಬ್ಬರಿಗೂ ಅದರ ಅನುಭವವಾಗಲಿಲ್ಲ. ಅವರ ಬಂಧನ ಹಾಗೇ ಇತ್ತು. ಸಭಿಕರು ಆ ಇಬ್ಬರ ಬಳಿ ಹೋಗಿ ಮೈಮುಟ್ಟಿ ಪ್ರಶ್ನಿಸಿದರೆ ಆ ಬಂಧಿತರು, 'ನಾವು ಯಾವ ಕಂಬದಲ್ಲಿ ಬಂಧಿಯಾಗಿದ್ದೇವೋ ಆ ಕಂಬದಲ್ಲೇ ಇದ್ದೇವೆ' ಎನ್ನುವ ಉತ್ತರ ಕೊಟ್ಟರು. ಇದನ್ನು ನೋಡಿದ ಮಂದಿ 'ಇದು ಪವಾಡವೇ' ಎಂದುಕೊಂಡದ್ದಲ್ಲದೆ 'ನಿಜವಾಗಿಯೂ ಈ ಕುಪ್ಪಣ್ಣ ಭಟ್ಟ ಅಸಾಧ್ಯ ಮನುಷ್ಯ' ಎಂದು ಭಟ್ಟನನ್ನು ಶ್ಲಾಘಿಸಹತ್ತಿದರು.

ಆ ದಿನಗಳಲ್ಲಿ ಶ್ರೀಮಂತರ ಮದುವೆ ಸಮಾರಂಭದಲ್ಲಿ ಸೂಳೆಯರ ಮೇಳ ಇರುತ್ತಿತ್ತು. ಸೂಳೆಯರ ಮೇಳ ಅಂದರೆ ಸೂಳೆಗಾರಿಕೆಯನ್ನೇ ವೃತ್ತಿ ಮಾಡಿಕೊಂಡ ಸುಂದರ ಸ್ತ್ರೀಯರು, ಅವರ ಮಕ್ಕಳು ಅಥವಾ ಅಕ್ಕತಂಗಿಯರು ಶ್ರೀಮಂತರು ಕರೆದ ಸಮಾರಂಭಗಳಿಗೆ ಹೋಗಿ ಅಲ್ಲಿ ಹಾಡುವ ಪದ್ಧತಿ. ಅದು ಮದುವೆಯ ಶ್ರೀಮಂತಿಕೆಗೆ ಕಳೆ ಕೊಡುತ್ತದೆ ಹಾಗೆ ಎಂದು ಜನ ನಂಬಿದ್ದರು. ಸೂಳೆಯರನ್ನು ಕರೆಸಿದವರು ಅವರ ಕೈಗೆ ತುಂಬ ದುಡ್ಡು ಕೊಡಬೇಕಿತ್ತು ಮತ್ತು ಅತಿಥಿ ಅಭ್ಯಾಗತರೂ ಕೂಡಾ 'ಇಂಥ ಹಾಡು ಹಾಡಿ' ಎಂದು ಆ ಹಾಡುಗಾರ್ತಿಯರನ್ನು ಒತ್ತಾಯಿಸಿ ಅವರೂ ಉದಾರವಾಗಿ ದುಡ್ಡು ನೀಡಿ ಹೆಮ್ಮೆಪಡುವುದೂ ಇತ್ತು. ಊರಿನ ಗುತ್ತಿನವರು ಇಲ್ಲವೇ ಬೀಡಿನವರು ಇಂಥ ಆಡಂಬರದ ಮದುವೆಗಳಿಗೆ ಬಂದರೆ ಅಂಥ ಶ್ರೀಮಂತರ ತೊಡೆಯ ಮೇಲೆ ಸೂಳೆಯರನ್ನು ಕೂರಿಸಿಕೊಳ್ಳುವ ಪರಿಪಾಠವು ವಿಶೇಷವಾಗಿತ್ತು. ಆ ಸಂದರ್ಭದಲ್ಲಿ ತೊಡೆಯ ಮೇಲೆ ಸೂಳೆಯರನ್ನು ದುಡ್ಡುಕೊಟ್ಟು ಕೂರಿಸಿದ ಮಂದಿ ತಾವು ಮೆಚ್ಚಿದ ಸೂಳೆಯರನ್ನು ಭೋಗಿಸಲು ಕರೆದಾಗ ಆ ಸೂಳೆಯರು ಅವರ ಆಹ್ವಾನವನ್ನು ನಿರಾಕರಿಸಲು ಸಾಧ್ಯವಿರದಂಥ ಪರಿಸ್ಥಿತಿಯೂ ವಾಡಿಕೆಯಾಗಿತ್ತು.

ಇಂದ್ರಾಣಿ ಎಂಬ ಸೂಳೆ ಕಣಪನಹಿತ್ಲು ಗ್ರಾಮದಲ್ಲಷ್ಟೇ ಅಲ್ಲ, ಸುತ್ತಮುತ್ತಲ ಗ್ರಾಮಗಳಲ್ಲಿ ಚೆನ್ನಾಗಿ ಹಾಡುವವಳಷ್ಟೇ ಅಲ್ಲ, ಆಕೆ ನಡೆದರೆ ಮುತ್ತು ಉದುರುತ್ತದೆ ಎನ್ನುವಂಥ ಪ್ರತೀತಿ ಇತ್ತು. ಅವಳ ಒಂದು ಕುಡಿನೋಟಕ್ಕೆ ಇಲ್ಲವೇ ಅವಳ ಮುಗುಳುನಗುವಿಗೆ ಶ್ರೀಮಂತರು ಹಗಲುಗನಸು ಕಾಣುವುದು ಆಗ ಎಲ್ಲೆಡೆಯೂ ಕೇಳಿ ಬರುತ್ತಿತ್ತು. ಅವಳು ನರ್ತಿಸುವುದರಲ್ಲೂ ಪ್ರಸಿದ್ಧಿ ಪಡೆದವಳಾಗಿದ್ದಳು. ಆಕೆ ನರ್ತನಕ್ಕೆ ಒಪ್ಪಿದರೆ ಅವಳನ್ನು ಆಹ್ವಾನಿಸಿದವರು ಹೆಚ್ಚುವರಿಯಾಗಿ ಅದಕ್ಕೆ ದುಡ್ಡು ಕೊಡಬೇಕಾಗುತ್ತಿತ್ತು. ಹಾಡುತ್ತಾ ಅವಳು ನರ್ತಿಸಿದರೆ ಸ್ವರ್ಗದಿಂದ ಇಳಿದ ಅಪ್ಸರೆಯೇ ತಮ್ಮ ಮುಂದಿದ್ದಾಳೆ ಎಂಬಂತೆ ಗಂಡಸರು ಆನಂದಿಸುತ್ತಿದ್ದರು. ಅದನ್ನು ನೋಡುತ್ತಿದ್ದ ಗೃಹಿಣಿಯರೂ ಕೂಡಾ ತಂತಮ್ಮ ಅಂಗಾಂಗಗಳು ಅವಳ ಅಂಗಾಂಗಗಳ ಹಾಗಿಲ್ಲವಲ್ಲ ಎಂದು ಪರಿತಪಿಸುತ್ತಾ ತಮ್ಮ ಗಂಡಂದಿರ ಚಪಲ ತಪ್ಪಲ್ಲ ಎಂಬಂತಿದ್ದರು.

ಇಂದ್ರಾಣಿ ಸೂಳೆಯಾಗಿದ್ದರೂ ಸುಲಭವಾಗಿ ಯಾರಿಗೂ ಕೈವಶವಾಗುವವಳಲ್ಲ ಎನ್ನುವುದು ಆ ಊರಿನ ಶ್ರೀಮಂತರ ಅನುಭವವಾಗಿತ್ತು. ಕೆಂಡಸಾಲೆ ಮನೆಯ ಸಂಕಪ್ಪ ಶೆಟ್ಟರು ಅವಳ ಅಂಗಸುಖ ಉಂಡಿದ್ದಾರೆ ಎಂಬ ಸುದ್ದಿ ಕೇಳಿದ ಭಂಡಸಾಲೆ ಮನೆಯ ಪೂಂಜರು ತನಗೆ ಆಕೆ ಯಾಕೆ ದಕ್ಕಲಿಲ್ಲ ಎಂದು ತಲೆಕೆಡಿಸಿಕೊಂಡರೆ, ಸುಂಕನೂರಿನ ಹೆಗ್ಗಡೆಯವರು ತನ್ನ ಬಾಕಿಮಾರು ಗದ್ದೆಯನ್ನು ಮಾರಿಯಾದರೂ ಅವಳನ್ನು ಒಮ್ಮೆ ಭೋಗಿಸಬೇಕು ಎನ್ನುವ ಮಾತನ್ನು ಅವರಿವರಲ್ಲಿ ಆಡಹತ್ತಿದ್ದರು. ಇಂಥ ದಿನಗಳಲ್ಲಿ ಇದು ಶ್ರೀಮಂತಿಕೆಯ ಮತ್ತು ಘನಸ್ತಿಕೆಯ ಪ್ರಶ್ನೆಯಾಗಿತ್ತೇ ವಿನಾ ತಪ್ಪಿಯೂ ಇದರ ಹಿಂದಿನ ನೈತಿಕತೆಯ ಪ್ರಶ್ನೆಯನ್ನು ಯಾರೂ ಪ್ರಶ್ನಿಸುತ್ತಿದ್ದಿಲ್ಲ. ಅಷ್ಟೇ ಅಲ್ಲ, ಸ್ತ್ರೀಯರ ದೇಹದ ಮೇಲೆ ಯಜಮಾನಿಕೆಯನ್ನು ಪ್ರತಿಷ್ಠಾಪಿಸುವುದೇ ಪುರುಷತ್ವ ಎನ್ನುವುದು ಜನಜೀವನದ ಭಾಗವಾಗಿತ್ತು.

ತುಂಡಕೂರು ಮನೆತನದ ಜಯದೇವಪ್ಪ ಅಂದರೆ ಹೆಣ್ಣುಬಾಕ ಎನ್ನುವುದು ಆಗ ಇಡೀ ಊರಿಗೇ ಗೊತ್ತಿದ್ದ ವಿಚಾರ. ಆದರೆ ಅವನದ್ದು ಕರಡಿ ಮುಖ ಮತ್ತು ಕೋಣನ ಹಾಗಿರುವ ಮೈಕಟ್ಟಾದ್ದುದರಿಂದ ಅವನನ್ನು ಯಾವ ಸೂಳೆಯೂ ಸುಲಭವಾಗಿ ಒಪ್ಪಿಕೊಳ್ಳುತ್ತಿರಲಿಲ್ಲ. ಅನಿವಾರ್ಯವಾಗಿ ಅವನ ಹೆಂಡತಿ ಅವನನ್ನು ಒಪ್ಪಿಕೊಂಡಿದ್ದರೂ ಇಂದ್ರಾಣಿ ಮಾತ್ರ ಅವನನ್ನು ತಾನು ಒಪ್ಪುವವಳಲ್ಲ ಎಂದು ಅವರಿವರಲ್ಲಿ ಹೇಳಿಕೊಳ್ಳುತ್ತಿದ್ದಳು. ಆಕೆ ತನ್ನ ಸಂಪರ್ಕಕ್ಕೆ ಬಂದ ವಿಟಪುರುಷರಲ್ಲಿ ಜಯದೇವಪ್ಪ ತನ್ನನ್ನು ಒಪ್ಪಿಕೊಳ್ಳಲು ಅನೇಕ ಬಾರಿ ವಿನಂತಿಸಿದ್ದರೂ, ತಾನು ಒಪ್ಪಲಿಲ್ಲ. ಅವನೇನು ಮಾಡಿಯಾನು ನೋಡೋಣ ಎಂದು ಆಡುತ್ತಿದ್ದುದು ಜಯದೇವಪ್ಪನ ಕಿವಿಗೂ ಬಿದ್ದಿತ್ತು. ಅದು ಅವನಿಗೆ ದೊಡ್ಡ ಅವಮಾನವಾಗಿತ್ತು. ಕುಪ್ಪಣ್ಣ ಭಟ್ಟನ ಈ ಪವಾಡದ ಕತೆ ಅವನ ಕಿವಿಗೆ ಬಿದ್ದ ಮೇಲೆ, ಅವನಿಗೆ ಈ ಭಟ್ಟರನ್ನು ಓಲೈಸಿಯಾದರೂ ಇಂದ್ರಾಣಿಯ ಸಂಗಸುಖವನ್ನು ಸವಿಯದಿದ್ದರೆ ತನ್ನ ಶ್ರೀಮಂತಿಕೆಗೆ ಅರ್ಥವಿಲ್ಲ ಎಂಬ ಗರ್ವ ಬಂತು. ಜೊತೆಗೆ ಸಾರ್ವಜನಿಕವಾಗಿ ಅವಳು ತನ್ನ ತೊಡೆಯ ಮೇಲೆ ಒಮ್ಮೆ ಕುಳಿತರೆ ಅದೇ ಒಂದು ಧನ್ಯತೆ ಎಂದು ಪರಿಭಾವಿಸಿಕೊಂಡ ಅವನು ಕುಪ್ಪಣ್ಣ ಭಟ್ಟನನ್ನು ಭೇಟಿಯಾಗಿ ತನ್ನ ಅಳಲನ್ನು ತೋಡಿಕೊಂಡ.

(ಸಶೇಷ)